# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

**ಸಂ.ಕಂ/ಹಬ/ವಿವಾದ/14/2013-14** ದಿ: 01 -08-2016

| ವಾದಿಗಳು | ಪ್ರತಿವಾದಿಗಳು |
|---|---|
| 1.ಬಿ.ವೆಂಕೋಬ ತಂದೆ ಬಂಗಾರಪ್ಪ<br>ನಾಡಂಗ ಗ್ರಾಮ. ಸಿರುಗುಪ್ಪ ತಾಲೂಕು<br>2.ಬಿ.ವಿ.ನಾರಾಯಣಮೂರ್ತಿ ತಂದೆ ಲೇಟ್<br>-ಬಿ.ವೀರಯ್ಯಶೆಟ್ಟಿ. ಸಿರುಗುಪ್ಪ, ನಗರ. | ಸಣ್ಣ ಭೀಮಲಿಂಗಪ್ಪ ತಂದೆ ಬಂಗಾರಪ್ಪ,<br>ವತ್ತುಮುರುಣಿ. ಗ್ರಾಮ. ಸಿರುಗುಪ್ಪ ತಾಲೂಕು. |

**ದಾವಾ ಜಮೀನಿನ ವಿವರ**

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ರಾರಾವಿ | 107/ಬಿ/2 | 8-00 | ಖುಷ್ಕಿ |

ಪೀಠಿಕೆ:

ಸಿರುಗುಪ್ಪ ತಾಲೂಕು ರಾರಾವಿ ಗ್ರಾಮದ ಸ.ನಂ.107/ಬಿ/2 ವಿಸ್ತೀರ್ಣ:8-00 ಎಕ್ರೆ ಜಮೀನಿಗೆ ಹಾಲಿ ಪಟ್ಟಾದಾರರಾದ **ಬಿ.ವಿ.ನಾರಾಯಣಮೂರ್ತಿ ತಂದೆ ಲೇಟ್ ಬಿ.ವೀರಯ್ಯಶೆಟ್ಟಿ** ಇವರಿಂದ **ಬಿ.ವಸೂರಮ್ಮ ಗಂಡ ಬಿ.ವೆಂಕೋಬ** ಇವರು ನೋಂದಣಿ ಸಂಖ್ಯೆ:205/2010-11 ದಿ:06-08-2010 ರ ಪ್ರಕಾರ ಹೊಂದಿದ ಜಿಪಿಎ ಅಧಿಕಾರ ಪತ್ರದ ಮೇರೆಗೆ ನೋಂದಣಿ ಕ್ರಯಪತ್ರ ಸಂಖ್ಯೆ:7886/2012-13 ದಿನಾಂಕ:22-02-2013 ರನ್ವಯ **ಬಿ.ವೆಂಕೋಬ ತಂದೆ ಬಂಗಾರಪ್ಪ** ಇವರು ನೋಂದಣಿ ಕ್ರಯ ಹೊಂದಿದ್ದು, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ.ಲೆ. ರಾರಾವಿ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ಸಣ್ಣ ಭೀಮಲಿಂಗಪ್ಪ ತಂದೆ ಬಂಗಾರಪ್ಪ** ಇವರು **"**ಪ್ರಸ್ತಾಪಿತ ಜಮೀನನ್ನು ಈ ಹಿಂದೆ ಬಾಡದ ವೀರಯ್ಯಶೆಟ್ಟಿ ಇವರಿಂದ ತಾನು ಖರೀದಿ ಅಗ್ರಿಮೆಂಟ್ ಹೊಂದಿದ್ದು, ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು**"** ದಿನಾಂಕ:23-03-2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ.ಬ.ಸಂಖ್ಯೆ: 94/2012-13 ದಿನಾಂಕ:29-06-2013 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:23-09-2013 ರಿಂದ 30-05-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಪ್ರತಿವಾದಿ ಸಣ್ಣ ಭೀಮಲಿಂಗಪ್ಪ ಇವರು ದಾವಾ ಜಮೀನನ್ನು ಈ ಹಿಂದೆ ಬಾಡದ ವೀರಯ್ಯಶೆಟ್ಟಿ ಇವರಿಂದ ದಿನಾಂಕ:07-09-1993 ರಂದು ಖರೀದಿ ಅಗ್ರಿಮೆಂಟ್ ಹೊಂದಿದ್ದು, ಇವರ ಮರಣ ನಂತರ ಸದ್ರಿಯವರ ಮಗ ಹಾಲಿ ವಿಕ್ರಯದಾರ ಬಿ.ವಿ.ನಾರಾಯಣಮೂರ್ತಿ ಇವರ ಹೆಸರಿಗೆ ಪೋತಿವಾರಸು ಮೇರೆಗೆ ಪಟ್ಟಾ ಬದಲಾವಣೆಯಾದ ನಂತರ ಇವರಿಂದ, ತನ್ನ ಸಹೋದರನಾದ ವೆಂಕೋಬ ತಂದೆ ಬಂಗಾರಪ್ಪ (ಹಾಲಿ ಕ್ರಯದಾರ) ಇವರು ತನ್ನ ಪತ್ನಿ ವಸೂರಮ್ಮ ಇವರ ಹೆಸರಿಗೆ ನೋಂದಣಿ ಸಂಖ್ಯೆ:205/2010-11 ದಿ:06-08-2010 ರ ಪ್ರಕಾರ ಹೊಂದಿದ ಜಿಪಿಎ ಅಧಿಕಾರ ಪತ್ರದ ಮೇರೆಗೆ ನೋಂದಣಿ ಕ್ರಯಪತ್ರ ಸಂಖ್ಯೆ:7886/2012-13 ದಿನಾಂಕ:22-02-2013 ರನ್ವಯ ತನ್ನ ಹೆಸರಿಗೆ ಕ್ರಯ ಹೊಂದಿದ್ದು, ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ನೀಡಿದ್ದು, ನಂತರ ಸದ್ರಿ ಪ್ರಕರಣದಲ್ಲಿ ತಾವು ಉಭಯತರೂ ರಾಜೀಯಾಗಿರುವುದಾಗಿ ತಿಳಿಸಿ ದಿನಾಂಕ:13-05-2016 ರಂದು ನೋಟರಿ ಸಮಕ್ಷಮ ನೀಡಿದ ಪ್ರಮಾಣ ಪತ್ರ ಸಲ್ಲಿಸಿ "ದಾವಾ ಜಮೀನಿನ ಪೈಕಿ ವಿ:4-00 ಎಕ್ರೆ ತನ್ನ ಭಾಗಕ್ಕೆ ದಿ:15-04-2016 ರಂದು ವಿಕ್ರಯ ಕರಾರು ಪತ್ರ ಬರೆದುಕೊಟ್ಟಿರುವ ಮೇರೆಗೆ, ಪ್ರಸ್ತುತ ದಾವಾ ಆಸ್ತಿಯನ್ನು ಕ್ರಯ ಹೊಂದಿರುವ **ಬಿ.ವೆಂಕೋಬ ತಂದೆ ಬಂಗಾರಪ್ಪ** ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಮ್ಮ ಯಾವುದೇ ರೀತಿಯ ಆಕ್ಷೇಪಣೆಗಳು ಇರುವುದಿಲ್ಲವೆಂದು ಅಫಿಡೆವಿಟ್ ಹಾಜರುಪಡಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128, 129 ರ ಅಡಿ, ಸಿರುಗುಪ್ಪ ತಾಲೂಕು ರಾರಾವಿ ಗ್ರಾಮದ ಸ,ನಂ.107/ಬಿ/2 ವಿಸ್ತೀರ್ಣ:8-00 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಸಂಖ್ಯೆ:7886/2012-13 ದಿನಾಂಕ:22-02-2013 ರನ್ವಯ ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/14/2013-14** **ದಿ:01 -08-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ರಾರಾವಿ ಗ್ರಾಮದ ಸ,ನಂ.107/ಬಿ/2 ವಿಸ್ತೀರ್ಣ:8-00 ಎಕ್ರೆ ಜಮೀನಿಗೆ ಹಾಲಿ ಪಟ್ಟಾದಾರರಾದ **ಬಿ.ವಿ.ನಾರಾಯಣಮೂರ್ತಿ ತಂದೆ ಲೇಟ್** ಬಿ.ವೀರಯ್ಯಶೆಟ್ಟಿ ಇವರಿಂದ **ಬಿ.ವಸೂರಮ್ಮ ಗಂಡ** ಬಿ.ವೆಂಕೋಬ ಇವರು ನೋಂದಣಿ ಸಂಖ್ಯೆ:205/2010-11 ದಿ:06-08-2010 ರ ಪ್ರಕಾರ ಹೊಂದಿದ ಜಿಪಿಎ ಅಧಿಕಾರ ಪತ್ರದ ಮೇರೆಗೆ ನೋಂದಣಿ ಕ್ರಯಪತ್ರ ಸಂಖ್ಯೆ:7886/2012-13 ದಿನಾಂಕ:22-02-2013 ರನ್ವಯ **ಬಿ.ವೆಂಕೋಬ ತಂದೆ ಬಂಗಾರಪ್ಪ** ಇವರು ಹೊಂದಿದ ನೋಂದಣಿ ಕ್ರಯಪತ್ರದಂತೆ, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ: 01 -08-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

M. Sutta.
**ತಹಶೀಲ್ದಾರರು,ಸಿರುಗುಪ್ಪ**

ಕರ್ನಾಟಕ ಸರ್ಕಾರ ★ ಸಿರುಗುಪ್ಪ ★ ತಹಶೀಲ್ದಾರರ ನ್ಯಾಯಾಲಯ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ 3.ಕಛೇರಿ ಕಡತಕ್ಕೆ